ಶ್ರೀ ಕುಂಭೆ ಸುಂದರರಾವ್ :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಮೀನುಗಾರಿಕಾ ರಸ್ತೆಯ ಬಗ್ಗೆ ಕೇಳಿದ ಪ್ರಶ್ನೆಗೆ 9 ರಸ್ತೆಗಳಿಗೆ ಬೇಡಿಕೆ ಬಂದಿದೆ, ಅದರಲ್ಲಿ ಒಂಬತ್ತು ರಸ್ತೆಗಳನ್ನು ಸ್ವಲ್ಪ ಸ್ವಲ್ಪ ಅಭಿವೃದ್ಧಿ ಮಾಡಿರುವುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಇದರಲ್ಲಿಯೂ ಕೂಡ ಅಧಿಕಾರಿಗಳ ದರ್ಬಾರು ನಡೆದಿದೆ. ನಾನು ಈ ಕುರಿತು ಅರ್ಜಿಗಳನ್ನು ಕೊಟ್ಟಿದ್ದೇನೆ. ಅದು ಜೀವಂತ ಇದೆಯೋ ಇಲ್ಲವೋ ಎಂದು ನನಗೆ ತಿಳಿಯ ಬೇಡವೇ? ಈ ರೀತಿಯಲ್ಲಿ ಶಾಸಕರನ್ನು ಅವಗಣನೆ ಮಾಡುವುದು ಏತಕ್ಕಾಗಿ? ಜನ ಪ್ರತಿನಿಧಿಗಳು ಎಂದು ನಗರಸಭೆ, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಮಂಡಲಪಂಚಾಯತ್, ಮುಂತಾಗಿ ಇರಬಹುದು. ಅವರುಗಳನ್ನು ಕೂಡ ಇಂಥ ವಿಚಾರದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಹೀಗೆ ನೀವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ನೀವು ಮಾಡಿದ್ದೇ ಸರಿ ಎಂದು ಹೇಳುವ ಸ್ಥಿತಿ ಬರುತ್ತದೆ. ಯಾವ ಯಾವ ಯೋಜನೆಗಳು ಇವೆ ಎಂದು ನಮಗೆ ತಿಳಿದಾಗ ಅದನ್ನು ನಾವು ನಮ್ಮ ಜನರಿಗೆ ತಲುಪಿಸುವ ಬಗ್ಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಹಾಗೆ ತಾವು ಏಕೆ ಮಾಡಿಲ್ಲ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :— ನಾನು ಮತ್ತು ಮಾನ್ಯ ಸದಸ್ಯರು ಕುಳಿತು ಚರ್ಚೆ ಮಾಡಿ, ಕ್ಷೇತ್ರದ ಮೀನುಗಾರರ ಅರ್ಜಿಯನ್ನು ಕೊಡಿ ಎಂದು ಹೇಳಿದ್ದೇನೆ.

ಶ್ರೀ ಕುಂಭೆ ಸುಂದರರಾವ್ :— ನಾವು ನೀವು ಚರ್ಚೆ ಮಾಡಬಹುದು. ಆದರೆ ನಿಮ್ಮ ಅಧಿಕಾರಿಗಳು ಯಾರೂ ಕೈಗೆ ಸಿಕ್ಕುತ್ತಿಲ್ಲ, ಅದರ ಬಗ್ಗೆ ಹೇಳಿ... ತಾವುಗಳು ಇಲ್ಲಿ ಹಾಗೂ ನಮ್ಮ ಊರಿನಲ್ಲಿಯೂ ಸಿಗುತ್ತೀರಿ. ತಾವುಗಳು ಅಧಿಕಾರಿಗಳಿಗೆ ಕಿವಿ ಮಾತು ಹೇಳಬೇಕು. ಜೊತೆಗೆ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಯೋಜನೆಗಳನ್ನು ಕಾರ್ಯಗತಗೊಳಿಸಬೇಕು.

ಅಧ್ಯಕ್ಷರು :— ತಮ್ಮ ಸಲಹೆ ತುಂಬಾ ಒಳ್ಳೆಯದು.

(ಶ್ರೀ ಕೆ.ಜಯರಾಮ ಶೆಟ್ಟಿಯವರ ಪರವಾಗಿ ಶ್ರೀ ಕುಂಭೆಸುಂದರರಾವ್)

ಮೀನುಗಾರಿಕಾ ಅಭಿವೃದ್ಧಿ ನಿಗಮ.

349(2266) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) :— ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕಾ ಅಭಿವೃದ್ಧಿ ನಿಗಮವು ಕಳೆದ ಎರಡು ವರ್ಷಗಳಲ್ಲಿ ಸಾಧಿಸಲಾದ ಪ್ರಗತಿ ಎಷ್ಟು ಹಾಗೂ ಇದರ ಕಾರ್ಯಕ್ರಮಗಳೇನು?

ಆ) ಮೀನುಗಾರಿಕೆ ಅಭಿವೃದ್ಧಿ ನಿಗಮವು ನಷ್ಟವನ್ನು ಅನುಭವಿಸುತ್ತಿದೆಯೇ ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಈ ಬಗ್ಗೆ ಸಮೀಕ್ಷೆಯನ್ನೇನಾದರೂ ನಡೆಸಲಾಗಿದೆಯೇ

ಇ) ಈ ನಿಗಮವನ್ನು ಲಾಭದಲ್ಲಿ ನಡೆಸಲು ಯಾವುದಾದರೂ ಮಾರ್ಗಸೂಚಿಯನ್ನು ಅನುಸರಿಸಲಾಗುತ್ತದೆಯೇ ಹಾಗಿದ್ದಲ್ಲಿ ಅದು ಯಾವುವು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :—

ಅ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ಕಳೆದ ಎರಡು ವರ್ಷಗಳಲ್ಲಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮಗಳು ಮತ್ತು ಅವುಗಳಲ್ಲಿ ಸಾಧಿಸಿದ ಪ್ರಗತಿ ಈ ಕೆಳಕಂಡಂತಿರುತ್ತದೆ:

(ರೂ.ಲಕ್ಷಗಳಲ್ಲಿ)

		1997-98		1998-88	
		ಪ್ರಮಾಣ ಟನ್ನುಗಳಲ್ಲಿ	ಮೌಲ್ಯ ರೂ.	ಪ್ರಮಾಣ (ಟನ್ನು)	ಮೌಲ್ಯ
1)	ಮೀನು ಆಹಾರ, ಮೀನಿಕ್ಕೆ ಉತ್ಪಾದನೆ	88.32	17.25	143	21.07
2)	ಮೀನುಗಾರಿಕಾ ದೋಣಿಗಳಿಗೆ ಡೀಸಲ್ ಮತ್ತು ಎಣ್ಣೆ ಮಾರಾಟ	-	553.62	-	421.00
3)	ಫೇನಿಕೃತ ಮೀನು ಮಾರಾಟ	-	185.65	-	118.53
4)	ಪರ್ಸ್ ದೋಣಿಗಳ ಹಸಿ ಮೀನು ಮಾರಾಟ	-	1068.00	-	1056.00
5)	ಮೀನು ಉಪಹಾರ ಗೃಹಗಳ ವಹಿವಾಟು	-	42.68	-	45.64
6)	ಮಂಜುಗಡ್ಡೆ ಉತ್ಪಾದನೆ ಮತ್ತು ಶೀಥಿಲೀಕೃತ ಕೋಣೆ	3666	64.08	2866	119.3

ಆ) ನಿಗಮವು ನಷ್ಟದಲ್ಲಿ ನಡೆಯುತ್ತಿರುವುದಕ್ಕೆ ಈ ಕೆಳಗಿನ ಮುಖ್ಯ ಕಾರಣಗಳಾಗಿವೆ:

1) ಹೆಚ್ಚಿನ ಸ್ಥಾವರಗಳು 1971ಕ್ಕಿಂತ ಹಿಂದೆ ಸ್ಥಾಪಿಸಲಾಗಿದ್ದು ಅವುಗಳ ಸಾಮರ್ಥ್ಯ ಕುಂಠಿತಗೊಂಡಿರುತ್ತದೆ.

2) ನಿಗಮದಲ್ಲಿ ದುಡಿಯುವ ಬಂಡವಾಳದ ಕೊರತೆ

3) ಕರಾವಳಿಯಲ್ಲಿ ಸ್ಥಾಪನೆಗೊಂಡಿರುವ ಖಾಸಗಿ ಮಂಜುಗಡ್ಡೆ ಕಾರ್ಖಾನೆಗಳ ಪೈಪೋಟಿಯಿಂದಾಗಿ ನಿಗಮದ ಮಂಜುಗಡ್ಡೆಗೆ ಹೆಚ್ಚಿನ ಬೇಡಿಕೆ ಇಲ್ಲದಿರುವುದು.

4) ಫನೀಕೃತ ಮೀನುಗಳನ್ನು ಖಾಸಗಿಯವರು ಕೂಡ ಮಾರಾಟ ಮಾಡುತ್ತಿರುವುದರಿಂದ ತೀವ್ರ ಪೈಪೋಟಿ ಎದುರಿಸಬೇಕಾಗಿ ಬಂದು ನಿಗಮದ ಆದಾಯದಲ್ಲಿ ಕುಂಠಿತವಾಗಿದೆ.

5) ನಿಗಮವು ಮುಖ್ಯವಾಗಿ ಮೀನುಗಾರಿಕೆ ಮತ್ತು ಮೀನುಗಾರರ ಸರ್ವತೋಮುಖ ಅಭಿವೃದ್ಧಿಯ ಪ್ರಾಥಮಿಕ ಅಂಗ ಸಂಸ್ಥೆಯಾಗಿರುತ್ತದೆ.

ಶ್ರೀ ಮುರಳಿಮೋಹನ್, ಆರ್ಥಿಕ ಮತ್ತು ಆಡಳಿತ ಸಲಹೆಗಾರರು, ಮಂಗಳೂರು ರವರಿಂದ ಇತಚ್ಚೀಚೆಗೆ ನಿಗಮದ ಆರ್ಥಿಕ ಅಧ್ಯಯನವನ್ನು ನಡೆಸಲಾಗಿದ್ದು ಅವರು ನೀಡಿರುವ ವರದಿಯು ಪರಿಶೀಲನೆಯಲ್ಲಿದೆ.

೫) ನಿಗಮವನ್ನು ಲಾಭದಲ್ಲಿ ನಡೆಸಲು ಸಾಧ್ಯವಾಗುವಂತೆ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲಾಗಿತ್ತಿದೆ.

1) ಮಂಜುಗಡ್ಡೆ ಸ್ಥಾವರಗಳ ಸಾಮರ್ಥ್ಯತೆಯನ್ನು ಹೆಚ್ಚಿಸುವುದರೊಂದಿಗೆ ನಿಗಮದ ಹಳೆಯ ಯಂತ್ರೋಪಕರಣಗಳನ್ನು ಹಂತ ಹಂತವಾಗಿ ಬದಲಾಯಿಸಿ ಸ್ಥಾವರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

2) ಸತತವಾಗಿ ನಷ್ಟ ಅನುಭವಿಸುತ್ತಿರುವ ಸ್ಥಾವರ ಘಟಕಗಳನ್ನು ಖಾಸಗಿಯವರಿಗೆ ನಡೆಸಲು ಲೈಸೆನ್ಸ್ ಮೇಲೆ ನೀಡಲಾಗುತ್ತಿದೆ.

3) ಪರ್ಸಿನ್ ಬೋಟಿನ ನೀನು ಮಾರಾಟ ಚಟುವಟಿಕೆಯನ್ನು ಹೊಸ ಕೇಂದ್ರಗಳಿಗೆ ವಿಸ್ತರಿಸಲಾಗುತ್ತಿದೆ.

4) ಶ್ರೀ ಮುರಳಿಮೋಹನ್, ಆರ್ಥ ಸಲಹೆಗಾರರು ನಿಗಮದ ಘನಶ್ಚೇತನದ ಬಗ್ಗೆ ನೀಡಿರುವ ವರದಿಯ ಶಿಫಾರಸ್ಸುಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕುಂಭೆ ಸುಂದರರಾವ್ :— ಮಾನ್ಯ ಅಧ್ಯಕ್ಷರೇ, ಶ್ರೀ ಜಯರಾಮ ಶೆಟ್ಟಿಯವರ ಪರವಾಗಿ ನಾನು ಅವರ ಪ್ರಶ್ನೆಯನ್ನು ಕೇಳಲು ತಾವು ಅನುಮತಿಸಬೇಕು.

ಶ್ರೀ ಶಿವಾನಂದ ನಾಯಕ್ :— ಮಾನ್ಯ ಅಧ್ಯಕ್ಷರೇ, ಕೇಂದ್ರ ಪುರಸ್ಕೃತ ಯೋಜನೆಯಡಿ ನಮ್ಮ ಭಟ್ಕಳ ತಾಲ್ಲೂಕಿನ 800 ಅರ್ಜಿಗಳನ್ನು ರಿವಿದ ಮೀನುಗಾರರಿಂದ ಕೊಟ್ಟಿದ್ದೇವೆ. ಆದರೂ ನಮಗೆ ಮನೆಗಳನ್ನು ಕೊಡಲಿಲ್ಲ.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ :— ಮಾನ್ಯ ಸದಸ್ಯರು ತಮ್ಮ ಕ್ಷೇತ್ರವನ್ನು ಪರಿಗಣನೆಗೆ ತೆಗೆದುಕೊಂಡರೆ ನಿಮಗೆ ಜಾಸ್ತಿ ಮನೆಗಳು ಬಂದಿರೆ. ಆದರೆ ಭಟ್ಕಳ ಮತ್ತು ಹೊನ್ನಾವರ್ ಮುಂತಾಗಿ ಬೇರೆ ಬೇರೆಯಾಗಿ ಪರಿಗಣಿಸಿದರೆ ಅದು ಕಡಿಮೆಯಾಗಿ ಕಾಣುತ್ತದೆ. ದಯಮಾಡಿ ಪಟ್ಟಿಯನ್ನು ನೇಡಿ, ನಿಮಗೆ ಸೂಕ್ತ ಪ್ರಮಾಣದಲ್ಲಿ ಸಿಗದಿದ್ದರೆ ನನ್ನ ಹತ್ತಿರ ಬಂದು ಚರ್ಚಿಸಬಹುದು.

ಶ್ರೀ ಆರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೇ, ಈ ಮೀನುಗಾರಿಕೆ ಇಲಾಖೆಯವರು ಒಳನಾಡು ಮೀನುಗಾರರನ್ನು ಬಹಳವಾಗಿ ಕಡೆಗಾಣಿಸಿದ್ದಾರೆ. ಹೊಳೆಗಳಲ್ಲಿ ಮುಂತಾಗಿ

ಮೀನುಗಾರಿಕೆ ಮಾಡಿ ಬದುಕು ನಡೆಸುವಂತಹ ಜನರು ನಮ್ಮಲ್ಲಿ ಬಹಳ ಜನರಿದ್ದಾರೆ. ಇವರಿಗೂ ಮನೆಗಳನ್ನು ಕೊಡುವಲ್ಲಿ ಆದ್ಯತೆಯನ್ನು ಕೊಟ್ಟು ಅವರಿಗೆ ನ್ಯಾಯ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಯಪ್ರಕಾಶ ಹೆಗ್ಡೆ:— ಮಾನ್ಯ ಅಧ್ಯಕ್ಷರೇ, ಇದು ಯೋಗ್ಯವಾದ ಸಲಹೆ. ಒಲನಾಡು ಮೀನುಗಾರರಿಗೆ ಮನೆಗಳನ್ನು ಕೊಡಲು ನಾವು ಪ್ರಯತ್ನ ಮಾಡಿದ್ದೇವೆ. ಪುನ: 5000 ಮನೆಗಳನ್ನು ಇವರಿಗೆ ಕೊಡಲು ಮಂಜೂರಾತಿಗೆ ಸಚಿವ ಸಂಪುಟದ ಮುಂದೆ ತರುತ್ತಿದ್ದೇವೆ. ಅದು ಲಭ್ಯವಾದರೆ ಎಲ್ಲಾ ಭಾಗಕ್ಕೂ ಮನೆಗಳನ್ನು ಕೊಡಲು ಸಾಧ್ಯವಾಗುತ್ತದೆ.

ಶ್ರೀ ಕುಂಭಿ ಸುಂದರರಾವ್:— ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ ಮೀನುಗಾರಿಕಾ ಅಭಿವೃದ್ಧಿ ಮಂಡಳಿಯು ಕಳೆದ ಎರಡು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೇಳಿದ್ದೇವೆ. ಈ ಬಗ್ಗೆ ವಿವರ ಕೊಟ್ಟಿದ್ದರಲ್ಲಿ ಎಲ್ಲವೂ ನಷ್ಟದಲ್ಲಿದ್ದು, ಇದ್ದುದ್ದರಲ್ಲಿ ಮೀನುಗಾರಿಕಾ ಉಪಹಾರಗೃಹಕ್ಕೆ ಅಡ್ಡಿ ಇಲ್ಲವೆಂದು ಕಾಣುತ್ತದೆ. ಬೆಂಗಳೂರಿನಲ್ಲಿರುವ ಕರಾವಳಿಯ ಜನರಿಗೆ ಮೀನು ತಿನ್ನುವ ಹವ್ಯಾಸವಿದೆ. ಆದರೆ ಈ ಉಪಹಾರ ಗೃಹಗಳಲ್ಲಿ ಸ್ವಚ್ಛತೆ ಶುಚಿ ರುಚಿಯ ಕೊರತೆಯಿದೆ. ನಮ್ಮ ಶಾಸಕರ ಭವನದಲ್ಲಿಯೂ ಒಂದು ಉಪಹಾರ ಗೃಹವಿದೆ. ಅಲ್ಲಿ ಗಬ್ಬು ವಾಸನೆಯಿದೆ. ಮೀನು ಮತ್ತು ಮೀನು ತಿನ್ನುವವರು 'ವಾಸನೆ' ಎಂದು ಹೇಳುವುದು ವಾಡಿಕೆಯಿರಬಹುದು. ಇಂಥ ಮೀನು ಉಪಹಾರ ಗೃಹಗಳು ಚೆನ್ನಾಗಿದ್ದರೆ ಜನರಿಗೆ ಅನುಕೂಲವಾಗುತ್ತದೆ. ಆದರೆ ಇಲ್ಲಿಗೆ ಬಂದರೆ. ಏಕೆ ಇಲ್ಲಿಗೆ ಬಂದೆ ಎನ್ನುವಂತಾಗುತ್ತದೆ. ನಿಮ್ಮ ನಿಗಮದ ಉಪಹಾರ ಗೃಹಕ್ಕೆ ಅಭಿಮಾನದಿಂದ ಜನರು ಬಂದು ತಿನ್ನುವ ವಾತಾವರಣ ಸೃಷ್ಟಿ ಮಾಡಬೇಕು. ನೀವು ನಿಗಧಿಪಡಿಸಿದ ದರದ ಬಗ್ಗೆ ಜನರು ಯೋಚಿಸುವುದಿಲ್ಲಯ ಅವರಿಗೆ ಒಳ್ಳೆಯ ಶುಚಿ ರುಚಿಯಾದ ಮೀನು ಇರಬೇಕು. ಆದುದರಿಂದ ಸ್ವಲ್ಪ ಲಾಭದಲ್ಲಿರುವ ಈ ಉಪಹಾರ ಗೃಹಗಳನ್ನು ಹೆಚ್ಚು ಲಾಭ ಪಡೆಯುವತ್ತ ಗಮನ ಕೊಡುವ ಬದಲು ಹಚ್ಚು ಜನರಿಗೆ ಪ್ರಯೋಜನವನ್ನು ಒದಗಿಸಿಕೊಡುವ ಬಗ್ಗೆ ಗಮನಕೊಡಬೇಕು. ಮೀನುಗಾರಿಕೆ ನಿಗಮವು ನಷ್ಟದಲ್ಲಿದೆಯೇ? ಹೌದಾದರೆ ಅದಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ ಬಹಳ ಬುದ್ದಿವಂತಿಕೆಯಿಂದ ಹೌದು-ಅಲ್ಲ ಎರಡನ್ನು ಹೇಳಲಿಲ್ಲ. ನಿಗಮದ ನಷ್ಟಕ್ಕೆ ಕಾರಣ ಏನೆಂಬುದನ್ನು ಹೇಳುತ್ತಾ ಹೋಗಿದ್ದೀರಿ. ಅದೇ ರೀತಿಯಲ್ಲಿ ನಿಗಮದಲ್ಲಿ ದುಡಿಯುವ ಬಂಡವಾಳದ ಕೊರತೆ ಇದೆ ಎಂದು ಕೂಡ

11.50 ಎ.ಎಂ.

ಹೇಳಿದ್ದೀರಿ. ಎಷ್ಟು ಕೊರತೆ ಇದೆ, ಅದನ್ನು ತುಂಬುವುದಕ್ಕೆ ಸರ್ಕಾರದ ಕಡೆಯಿಂದ ಏನು ಕೆಲಸ ನಡೆದಿದೆ ಎಂಬ ಬಗ್ಗೆ ವಿವರಣೆ ಬೇಕು. ಇನ್ನು ಸತತವಾಗಿ ನಷ್ಟ ಅನುಭವಿಸುತ್ತಿರುವ ಸ್ಥಾವರಗಳನ್ನು ಖಾಸಗಿಯವರಿಗೆ ಕೊಡುವ ಯೋಜನೆ ಇದೆ ಎನ್ನುತ್ತೀರಿ. ಈ ಮಂಜುಗಡ್ಡೆ ಕಾರ್ಖಾನೆಗಳು ನಮ್ಮ ಕರಾವಳಿಯುದಕ್ಕೂ ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ, ಎಲ್ಲರೂ ಲಾಭ ಮಾಡುತ್ತಿದ್ದಾರೆ, ನಮಗೆ ಮಾತ್ರ ನಷ್ಟ ಯಾಕೆ? ನಮ್ಮ ಅಧಿಕಾರಿಗಳು ಯಾರಿದ್ದಾರೆ

ಅವರು ಖಾಸಗಿಯವರಿಗೆ ಆಶೀರ್ವಾದ ಮಾಡಿ ನಮ್ಮ ಕಾರ್ಖಾನೆಗಳು ನಷ್ಟದಲ್ಲಿ ಬಿದ್ದುಹೋಗುವ ಹಾಗೆ ಮಾಡುತ್ತಾರೋ ಅಂತ ಒಂದು ಅನುಮಾನ ಇದೆ. ಕೆಲವು ಕಡೆ ಇನ್ನೂ ಒಂದು ನಡೆಯುತ್ತಿರಬಹುದೆಂದು ನನಗೆ ವರ್ತಮಾನ ಬಂದಿದೆ. ಖಚಿತವಾಗಿ ಹಸಾಗೆ ಅಂತ ನಾನು ಹೇಳಲಾರೆ. ಉಳಿದವರಿಗೆ ಲಾಭವಾಗುವುದು, ನಮಗೆ ನಷ್ಟವಾಗುತ್ತದೆ ಅಂದರೆ ಏನೋ ನಡೆದಿದೆ, ಅಂ ಏನು ಅಂತ ಪರಿಶೀಲನೆ ಮಾಡುತ್ತೀರಾ ಮತ್ತು ಖಾಸಗಿಯವರಿಗೆ ಕೊಡುವ ವಿಚಾರದಲ್ಲಿ ಯಾವ್ಯಾವ ಘಟಕವನ್ನು ಖಾಸಗಿಯವರಿಗೆ ಕೊಟ್ಟು ಲಾಭ ಮಾಡುವ ವಿಚಾರ ಮಾಡಿದ್ದೀರಿ?

ಶ್ರೀ ಜಯಪ್ರಕಾಶ ಹೆಗಡೆ :— ಮಾನ್ಯ ಅಧ್ಯಕ್ಷರೆ ನೀವು ನಿಮ್ಮ ಕ್ಯಾಂಟೀನ್ ಬಗ್ಗೆ ಮಾತನಾಡಿದ್ದೀರಿ ಕಬ್ಬನ್ ಪಾರ್ಕಿನಲ್ಲಿರುವ ಕ್ಯಾಂಟೀನ್‌ನಲ್ಲಿ ನಾನು ಮಂತ್ರಿಯಾಗುವ ಮುಂಚೆ ದಿನಕ್ಕೆ ಎರಡು ಸಾವಿರ ವ್ಯಾಪಾರ ಆಗುತ್ತಿದ್ದು ಈಗ 14ರಿಂದ 15 ಸಾವಿರ ರೂಪಾಯಿಗಳಷ್ಟು ವ್ಯಾಪಾರವಾಗುತ್ತಿದೆ. ಅಲ್ಲಿದ್ದ ಯುಟೆನ್ಸಿಲನ್ನು ಬದಲಾಯಿಸಲಿಕ್ಕೆ ನಾನು ಪ್ರಯತ್ನಿಸಿದ್ದೇವೆ. ಇಲ್ಲೂ ಸಹ ಸರಿ ಇರದಿದ್ದರೆ ಇವತ್ತು ನಾಳೆ ನಾನು ಅಲ್ಲಿಗೆ ಹೋಗಿ ಸ್ವಚ್ಛತೆ ಇರದಿದ್ದರೆ ಖಂಡಿತ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಇನ್ನು ಮಂಜುಗಡ್ಡೆ ಕಾರ್ಖಾನೆ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ನಷ್ಟಕ್ಕೆ ಕಾರಣ, ಅಲ್ಲಿರುವ ಅಧಿಕಾರಿಗಳಿಗೆ ರೇಟ್ ಫಿಕ್ಸಯೇಶನಿದ್ದಾಗ ರೇಟ್ ಕಮ್ಮಿ ಮಾಡುವುದಕ್ಕೆ ಅಧಿಕಾರ ಇಲ್ಲ. ಅವರು ಬಂದು ಪರ್ಮಿಶನ್ ತೆಗೆದುಕೊಳ್ಳಬೇತಾಗುತ್ತದೆ. ಒಂದು ವೇಳೆ ಅವರಷ್ಟಕ್ಕೆ ಅವರು ಕಮ್ಮಿ ಮಾಡಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಇದೆ. ಅಷ್ಟೇ ಪ್ರೈವೇಟ್ ನವರಿಗೂ ನಮಗೂ ಇರುವ ವ್ಯತ್ಯಾಸ. ಮಾರ್ಕೇಟ್ ರೇಟ್ ಏನಿದೆಯೋ ಅದರಂತೆ ಅವನು ಆಗಲೇ ರೇಟ್ ಬದಲಾಯಿಸುತ್ತಾನೆ. ಅದ್ದರಿಂದ ಹೆಚ್ಚಿನ ಮಂಜುಗಡ್ಡೆ ಕಾರ್ಖಾನೆಗಳನ್ನು ಪ್ರೈವೆಟೈಸ್ ಮಾಡಬೇಕೆಂದಿದ್ದೇವೆ. ಇವೆಲ್ಲ 1971ಕ್ಕೆ ಹಿಂದಿನವು. ಅದರ ನಿರ್ವಹಣಾ ವೆಚ್ಚ ದುಬಾರಿ ಆಗುತ್ತದೆ. ಅದಕ್ಕಾಗಿ ಈಗಾಗಲೇ ಮೂರು ಮಂಜುಗಡ್ಡೆ ಕಾರ್ಖಾನೆಗಳಿ ದುರಸ್ಥಿ ಮಾಡಿದ್ದೇವೆ. ಹಾಗೆ ಹಂತ ಹಂತವಾಗಿ ದುರಸ್ತಿ ನಡೆಸುತ್ತಿದ್ದು ಇದೆಲ್ಲ ಆದ ಮೇಲೆ, 1996-97, 97-98ನೇ ಸಾಲುಗಳಲ್ಲಿ ನಾವು ಲಾಭವನ್ನು ಮಾಡಿದ್ದೇವೆ; ಇಲ್ಲ ಅಂತ ಅಲ್ಲ. ದುರಸ್ತಿ ಎಲ್ಲ ಮಾಡಿದ ಮೇಲೆ ಲಾಭ ಗಳಿಸಲು ಸಾಧ್ಯವಾಗುತ್ತದೆ.

ಯಳಂದೂರು ತಾಲ್ಲೂಕು ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ಬೆಟ್ಟದಲ್ಲಿ ಅರಣ್ಯ ಜಮೀನಿನ ಗುತ್ತಿಗೆ.

350(2328) ಶ್ರೀ ಎನ್. ಜಯಣ್ಣ (ಕೊಳ್ಳೇಗಾಲ) :— ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಯಳಂದೂರು ತಾಲ್ಲೂಕು, ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನಿನ ವಿಸ್ತೀರ್ಣವೆಷ್ಟು?